ಒಳಗಿನ ಡಬ್ಬಿಯೊಳಗೆ ಬೆಟ್ಟಗುಡ್ಡಗಳನ್ನು ತುಂಬಿಡಲಾಗಿದೆ ಮತ್ತು ಬಾಟಲಿಗಳಲ್ಲಿ ನದಿಗಳು, ಮಣ್ಣಿನ ನಮೂನೆಯನ್ನು ಕಂಡು ಅಥವಾ ಎರಡು ನದಿಗಳನ್ನು ಪ್ರಾಶನ ಮಾಡಿ ನೀವು ಸೌದಾ ಮಾಡಬಹುದು. ಅದಕ್ಕೆ ಸಂಬಂಧಿಸಿದ ಎಲ್ಲ ಕಾಗದ ಪತ್ರಗಳಿವೆ. ಜನುಮದ ದಾಖಲೆಯಿಂದ ಹಿಡಿದು ಸಾವಿನ ನೋಂದಣಿವರೆಗಿನ ಎಲ್ಲ ಸರ್ಟಿಫಿಕೇಟ್‌ಗಳಿವೆ. ಇಲ್ಲಿ ವಾಸ್ತವ್ಯದ ಪ್ರಮಾಣ ಪತ್ರ ಅಥವಾ ರೇಶನ್‌ಕಾರ್ಡ್ ಇಲ್ಲವೇ ಮನುಷ್ಯ ಜೀವಂತವಾಗಿರುವ ಪುರಾವೆಯ ಪತ್ರಗಳು ಸಿಗುತ್ತವೆ. ವಿಮಾನಗಳು, ಬ್ಲ್ಯಾಕ್ ಬಾಕ್ಸ್, ಬಸ್‌ನ ತಗಡುಗಳು ಮತ್ತು ರೇಲ್ವೆ ಹಳಿಗಳು ಮತ್ತು ಫಿಶ್‌ಪ್ಲೇಟ್, ಮನೆ ಕಟ್ಟುವ ಈಚ್ ಎಂಡ್ ಎವ್ವರಿ ಸಾಮಾನು, ಮನೆಗಳನ್ನು ಮುರಿಯುವ ಸಾಮಾನು, ಬಿಲ್ಡಿಂಗ್ ಬೀಳಿಸುವ ಕಟರ್ಸ್, ಸೇತುವೆ ಧ್ವಂಸ ಮಾಡುವ ಬಾಂಬ್, ಆರ್‌ಡಿಎಕ್ಸ್, ಜಿಲೆಟಿನ್ ಕಡ್ಡಿಗಳು, ಗಾಜಿನ ತುಣುಕುಗಳು, ಸೀಮೆಎಣ್ಣೆ ಮತ್ತು ಮಾಚಿಸ್, ದುಬಾರಿ ಮದ್ಯ. ತೆಳ್ಳಗಿನ ಬಟ್ಟೆ, ರಾಜ ಮಹಾರಾಜರ ಅಸಲಿ–ನಕಲಿ ತಲವಾರಗಳು, ಭರ್ಚಿಗಳು, ಗುರಾಣಿಯಿಂದ ಅಟಮ್‌ಬಾಂಬ್, ಸ್ಟೇನ್‌ಗನ್ನಿನವರೆಗೆ. ಕಬ್ಬಿಣ, ಹಿತ್ತಾಳೆ, ಕತ್ತಿ, ಅಲ್ಯುಮಿನಿಯಮ್‌ನ ಪಂಜರಗಳು ಮತ್ತು ಸಲಾಕೆ ಕತ್ತರಿಸುವ ಹತಾರಗಳು. ಪ್ರಾಚೀನ ಧರ್ಮಗ್ರಂಥ, ಅವುಗಳ ಕರಫ್ಟ್ ಎಡಿಶನ್ಸ್ ಮತ್ತು ಕಂಪ್ಯೂಟರ್, ಮೊಬೈಲ್, ಇಂಟರ್ನೆಟ್, ಫ್ಲಾಫಿಗಳು, ಸಿಮ್‌ಕಾರ್ಡ್, ವೈರಸ್ ಇತ್ಯಾದಿ. ಚಿಕ್ಕ ಮೊಳೆ, ಹಳೆಯ ನಾಣ್ಯಗಳು, ಫಾರಿನ ಕರೆನ್ಸಿ, ಸ್ಟ್ಯಾಂಪ್ ಪೇಪರ್ಸ್, ರಾಷ್ಟ್ರಪತಿಯ ಸೀಲುಗಳು, ಸಂಪೂರ್ಣ ದೇಶವೇ ಪಸರಿಸಿದೆ ಎಂದೇ ಭಾವಿಸಿ. ನಾನು ಅಂತೇನೆ, ಕೊಯೀ ಭಿ ಚೀಜ್ ಉಠಾವ, ರೇಟ್ ನೆಗೋಶಿಯೆಬಲ್ ಆಗಿದೆ. ಇಲ್ಲಿಯ ವಿವಿಧತೆಯಿಂದ ಅಲಂಕೃತಗೊಂಡ ಸಮೃದ್ಧ ಪರಂಪರೆಯ ಬಗೆಗೆ ನನಗೆ ಅಭಿಮಾನವಿದೆ.

ಈ ಪರಂಪರೆ ಕುಂಠಿತಗೊಳ್ಳುವ ಒಂದು ಕ್ಷಣ ಬಂದಿತ್ತು. 15 ಆಗಸ್ಟ್ 1947. ತುಂಬ ಶ್ರಮದಿಂದ ಕಟ್ಟಿದ ಇದೆಲ್ಲ ಮುಗಿಯುತ್ತದೆ, ತನ್ನ ಸಾಮ್ರಾಜ್ಯ ಕುಸಿಯುತ್ತದೆ ಎಂದು ಭಾವಿಸಿದ್ದ ನನ್ನಜ್ಜ ಎದೆ ಎದೆ ಬಡಿದುಕೊಂಡು ಅತ್ತಿದ್ದ. ಆಗ ನನ್ನಪ್ಪ ಯುವಕನಾಗಿದ್ದ. ಅವನು ಅಜ್ಜನಿಗೆ ಹೇಳಿದ, ‘ಅಪ್ಪ, ನೀನು ಹೆದರಬೇಡ. ನಾನು ರಕ್ತಸುರಿಸಿಯಾದರೂ ಆಕಾಶ ಪಾತಾಳ ಒಂದು ಮಾಡಿಯಾದರೂ ಈ ಸಂಪೂರ್ಣ ಜಗತ್ತು, ನಮ್ಮ ವಾರಸಾ, ನಮ್ಮ ಪರಂಪರೆಯನ್ನು ಜೀವಂತವಾಗಿರಿಸುತ್ತೇನೆ. ನಮ್ಮ ಮನೆತನದ, ಕುಲದ ಘನತೆಯನ್ನು ಬೆಳೆಸುತ್ತೇನೆ’. ಅವನು ಕೊಟ್ಟ ಮಾತಿನಂತೆ ನಡೆದುಕೊಂಡ. ನನ್ನಪ್ಪ ದಿಟ್ಟನೂ, ಎದೆಗಾರಿಕೆಯವನೂ ಆಗಿದ್ದ. ಭಾರೀ ಖಿಡಕ್.

ನಾನು ಬಾಲಕನಾಗಿದ್ದಾಗ ಅಂಗಡಿಗೆ ಬರುತ್ತಿದ್ದೆ. ಹಿಂದಿನ ಕತ್ತಲೆಯ ಸಾಮಾನುಗಳ ಗುಹೆಯ ಮೂಲೆಯಲ್ಲಿ ಕಳೆದು ಹೋಗುತ್ತಿದ್ದೆ. ಈ ಕಗ್ಗತ್ತಲೆ ಎಂದರೆ ನನ್ನ ಸಾಮ್ರಾಜ್ಯ. ಮೇರಾ ಅಕೆಲಾಪನ್ ಬಾಹೋಮೆ ಸಮೇಟ ಲೇತಾ ಥಾ ಯೇ ಅಂಧೇರಾ. ನನ್ನೊಳಗೆ ದೀಪ ಹೊತ್ತಿಕೊಳ್ಳುತ್ತಿತ್ತು. ಅದರ ಬೆಳಕಿನಲ್ಲಿ ಹಳೆಯ ಸಾಮಾನುಗಳನ್ನು ನೋಡುತ್ತಿರುತ್ತಿದ್ದೆ. ಕೈಯಲ್ಲಿ ಎತ್ತಿಕೊಳ್ಳುತ್ತಿದ್ದೆ. ಕ್ಯಾಕ್ಯಾ ಸೋಚತಾ ಥಾ ಮೈ. ಅಬ್ ಲಗತಾ ಹೈ ಬಚಪನಾ ಥಾವೋ. ಆದರೆ, ತುಂಬ ಸಮಾಧಾನವೆನಿಸುತ್ತಿತ್ತು. ಕಲ್ಪನೆಯ ಸಾಮ್ರಾಜ್ಯದೊಳಗೆ ಮುಳುಗಿ ಬಿಡುತ್ತಿದ್ದೆ ಮತ್ತು ಆ ಒಂದೊಂದೇ ತುಣುಕುಗಳನ್ನು ಜೋಡಿಸುತ್ತ ಕೂತಿರುತ್ತಿದ್ದೆ. ಏನೋ ಆಕಾರ ಸಿದ್ಧಗೊಳ್ಳುತ್ತಿತ್ತು. ಎಂಥದೋ ಗೊತ್ತಿಲ್ಲ. ಆದರೆ, ಅದರಿಂದ ಏನಾದರೂ ಸಿದ್ಧವಾಗುತ್ತದೆ ಎಂದೆನಿಸುತ್ತಿತ್ತು. ಹೀಗೆಯೇ ಒಮ್ಮೆ ತುಣುಕು ಮುರುಕು ವಸ್ತುಗಳನ್ನು ಜೋಡಿಸುತ್ತ ಒಳಗೆ ಕುಳಿತಿದ್ದೆ. ಅಷ್ಟರಲ್ಲಿ ಬಾಬೂಜಿ ಬಂದರೆ ನನ್ನ ಅಪ್ಪ, ಅವನು ನನ್ನ ಕೆನ್ನೆಗೆ ಫಟ್ಟೆಂದು ಹೊಡೆದು ಹೇಳಿದ, ‘ಅಬೇ ಬೇವಕೂಫ್, ಯೇ ಚೀಜೆ ಜೋಡನೆ ಕೆಲಿಯೇ ನಹೀ ಹೈ, ಬೇಚನೆ ಕೆಲೀಯೇ ಹೈ. ಐಸೇ ತೋ ದಂಧಾ ಚೌಪಟ್ ಕರ್ ದೇಗಾ ತೂ–ಮೇರಾ, ಪ್ರತಿಯೊಂದು ವಸ್ತು ಮಾರುವುದು ಮತ್ತು ಸ್ವಾರ್ಥ ಈಡೇರಿಸಿಗೊಳ್ಳುವುದೇ ನಮ್ಮ ಧ್ಯೇಯ ಎಂಬುದು ಸದಾಕಾಲ